**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**
**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್/ಏಪ್ರಿಲ್, 2009**
**S.S.L.C. EXAMINATION, MARCH/APRIL, 2009**

**ಮಾದರಿ ಉತ್ತರಗಳು**
# MODEL ANSWERS

ದಿನಾಂಕ : 01. 04. 2009 **ಸಂಕೇತ ಸಂಖ್ಯೆ : 33-K**

Date : 01. 04. 2009 **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ
## Subject : SECOND LANGUAGE — KANNADA

[ ಪರಮಾವಧಿ ಅಂಕಗಳು : 100
[ Max. Marks : 100

| *ಪ್ರಶ್ನೆ ಸಂಖ್ಯೆ* | *ಉತ್ತರದ ಕ್ರಮಾಕ್ಷರ* | *ಪ್ರಶ್ನಾನುಸಾರ ಮೌಲ್ಯಮಾಪನ* | *ಅಂಕಗಳು* |
|---|---|---|---|
| | | **ಎ – ವಿಭಾಗ** | |
| | | ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ. | 35 × 1 = 35 |
| 1. | ಡಿ | ರಾಷ್ಟ್ರ ಧ್ವಜವನ್ನು | |
| 2. | ಡಿ | ಥೋಟಾ ಗಾಂಧಿ | |
| 3. | ಡಿ | ನಿಸರ್ಗ ಶಿವಾರಾಧಕರು | |
| 4. | ಎ | ಚಕ್ಕೆರೆ | |
| 5. | ಡಿ | ಕಲ್ಲೊಡ್ಡು ಗೋಕುಂಟೆಗಳು | |
| 6. | ಬಿ | ಮಳೆ ಕೊಯ್ಲು | |
| 7. | ಡಿ | ನಾಕು ತಂತಿ | |
| 8. | ಸಿ | ಮಹಾತ್ಮ ಗಾಂಧಿ | |
| 9. | ಸಿ | ಆಧ್ಯಾತ್ಮ ಪಥದಲ್ಲಿ ಮುಂದೆ ಹೆಜ್ಜೆಯನಿಡಲು | |
| 10. | ಬಿ | 1950 | |
| 11. | ಬಿ | ಸಂಕ್ಷಿಪ್ತ ಬ್ರಹ್ಮಾಂಡ | |
| 12. | ಬಿ | ಮಗ | |
| 13. | ಎ | ದಕ್ಷಿಣ ಕನ್ನಡದ ಶತಮಾನದ ಕಾವ್ಯ | |

[ Turn over

| ಪ್ರಶ್ನೆ ಸಂಖ್ಯೆ | ಉತ್ತರದ ಕ್ರಮಾಕ್ಷರ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|---|
| 14. | ಡಿ | ಪಂಚೇಂದ್ರಿಯಗಳು ಇರುವಾಗ | |
| 15. | ಡಿ | ಕರ್ಪೂರವನ್ನು | |
| 16. | ಬಿ | ಧಾತು | |
| 17. | ಬಿ | ಜಗತ್ + ಈಶ್ವರ | |
| 18. | ಬಿ | ಕ್ಷೀಣ | |
| 19. | ಬಿ | ಓದಿದನು | |
| 20. | ಸಿ | ವರ್ಣ | |
| 21. | ಬಿ | ದ್ವಿಗು | |
| 22. | ಬಿ | ಸಪ್ತಮೀ | |
| 23. | ಸಿ | ಸನ್ಯಾಸಿನಿ | |
| 24. | ಸಿ | ಉಪಮಾ | |
| 25. | ಸಿ | ದ್ವಿರುಕ್ತಿ | |
| 26. | ಡಿ | ಅಣ್ಣಂದಿರು | |
| 27. | ಎ | ಉದ್ಗಾರ ವಾಚಕ | |
| 28. | ಸಿ | ದ್ವಿರುಕ್ತಿ | |
| 29. | ಎ | ರೈನ್ ಸೆಂಟರ್ | |
| 30. | ಸಿ | ಬಳೆಗಾರ | |
| 31. | ಬಿ | ನಾವು | |
| 32. | ಡಿ | ಸಂಯೋಜಿತ ವಾಕ್ಯ | |
| 33. | ಡಿ | ಶಾರದೆ | |
| 34. | ಬಿ | ಮೂರು | |
| 35. | ಸಿ | ಪಾಠವನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಬಿ – ವಿಭಾಗ** | |
| | ಪ್ರಶ್ನೆ ಸಂಖ್ಯೆ 36 ರಿಂದ 45 ರವರೆಗೆ ಒಂದು ಅಂಶಕ್ಕೆ ಒಂದು ಅಂಕದಂತೆ ಪ್ರತಿ ಪ್ರಶ್ನೆಗೆ ಎರಡು ಅಂಕಗಳು. | 10 × 2 = 20 |
| 36. | ದೊರೆ ಬಂದು ರಾಣಿಯನ್ನು ಸಂತೋಷವೇ ಎಂದು ಕೇಳಿದಾಗ ರಾಣಿ 'ಸಂತೋಷ ಎಲ್ಲಿಂದ ? ಇದೇ ತಾನೇ ನಮ್ಮ ವಿದೂಷಕ ಸತ್ತುಹೋದ ಅಂತ ಗೌರಿ ಬಂದಿದ್ದಳು. ಶವಸಂಸ್ಕಾರಕ್ಕೆ ನೂರು ವರಹವನ್ನು ನಾನೇ ಕೊಟ್ಟು ಕಳುಹಿಸಿದೆ. ವಿದೂಷಕ ಹೋದ ಮೇಲೆ ಆಸ್ಥಾನದಲ್ಲಿ ಮಾಡೋರು ಯಾರು ? ನಮಗೆ ಸಂತೋಷವೆಲ್ಲಿ ?' ಎಂದು ಹೇಳಿದಳು. | |
| 37. | ಪೂರ್ಣಿಮಾಳನ್ನು ಇಪ್ಪತ್ತು ಜನರಿದ್ದ ದೊಡ್ಡ ಕುಟುಂಬಕ್ಕೆ ಸೊಸೆಯನ್ನಾಗಿ ಮಾಡಿದ್ದರು. ಇವಳ ಕೆಲಸವೆಂದರೆ ಹೊತ್ತಿಗೆ ಅರವತ್ತರಿಂದ ಎಂಬತ್ತು ರೊಟ್ಟಿ ಬಡಿಯುವುದು. ಮುಂಜಾನೆಯಿಂದ ಸಂಜೆಯವರೆಗೂ ಅದೇ ಕೆಲಸ. ಒಂದು ತಿಂಗಳು ಕಳೆಯುವುದರೊಳಗೆ ರಾತ್ರಿ ಮಲಗಿದಾಗಲೂ ಅವಳ ಕೈಗಳು ರೊಟ್ಟಿಯನ್ನು ಬಡಿಯುವ ಕೆಲಸ ಮುಂದುವರೆಸುತ್ತಿತ್ತು. ಇದರ ಪರಿಣಾಮವಾಗಿ ಗಂಡನ ಬೆನ್ನು ನೀಲಿಗಟ್ಟಿತು. | |
| 38. | ಬಾಲ್ಯದಲ್ಲಿ ಆರ್ಥಿಕವಾಗಿ ಕಾರಂತರಿಗೆ ಬಡತನವಿದ್ದರೂ ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ. ತಾಯಿ ಹಾಡುತ್ತಿದ್ದ ಸಂಪ್ರದಾಯದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಸುತ್ತಮುತ್ತಲಿನ ಊರುಗಳ ಜಾತ್ರೆ, ಭೂತದ ಕೋಲ, ರಥೋತ್ಸವ, ವಾದ್ಯಗಳ ಧ್ವನಿ ಇವೇ ಮೊದಲಾದವು ಕಾರಂತರಿಗೆ ಸಿಕ್ಕ ಕಲಾ ಶ್ರೀಮಂತಿಕೆ. | |
| 39. | ಜನತೆಯನ್ನು ಸ್ವಾತಂತ್ರ್ಯ ಸ್ವರಾಜ್ಯಕ್ಕೆ ಪ್ರೇರೇಪಿಸುವುದು ಹಾಗೂ ಸ್ವರಾಜ್ಯದ ಎರಡನೆಯ ಅಂಗವಾದ ಸ್ವಾವಲಂಬನೆಗೆ ಹಳ್ಳಿಗರನ್ನು ಸಿದ್ಧಗೊಳಿಸುವುದು. ಇವೆರಡು ರಾಯರು ಮಾಡಿದ ಮುಖ್ಯ ಕಾರ್ಯಗಳು. | |
| 40. | ರಾಷ್ಟ್ರದ ಬಂಜರು ಭೂಮಿಯ ಸಾಗುವಳಿ ಅತ್ಯಗತ್ಯವೆಂಬುದನ್ನು ಮರಿಗೌಡರು ಮೊದಲಿಗೆ ತೋರಿಸಿಕೊಟ್ಟರು. ಎಲ್ಲಕ್ಕಿಂತ ಮಿಗಿಲಾಗಿ ಅವರು ರೈತರ ಕ್ಷೇಮದ ಬಗ್ಗೆ ಕಳಕಳಿ ಹೊಂದಿದ್ದರು. ಆರ್ಥಿಕ ಪ್ರಗತಿಗೆ, ವಾಣಿಜ್ಯಾಭಿವೃದ್ಧಿಗೆ, ಅಂತರರಾಷ್ಟ್ರೀಯ ಬಾಂಧವ್ಯಕ್ಕೆ ತೋಟಗಾರಿಕೆ ಬೆಳೆಗಳು ಹೊಸ ದಾಖಲೆಯನ್ನು ನಿರ್ಮಿಸಬೇಕೆಂದು ಮರಿಗೌಡರ ಹೇರಾಸೆಯಾಗಿತ್ತು. | |
| 41. | ಅರಣ್ಯ ನಾಶ, ನೀರಿನ ಪೋಲು, ಅತಿಯಾದ ಕೊಳವೆ ಬಾವಿ ಕೊರೆತ, ನಗರಗಳಲ್ಲಿ ಕಾಂಕ್ರೀಟೀಕರಣ ಇವೆಲ್ಲದರಿಂದಾಗಿ ಬಿದ್ದ ಮಳೆ ನೀರು ಭೂಮಿಯೊಳಗೆ ಇಂಗುವುದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. | |
| 42. | ಬ್ರಿಟಿಷರ ಆಡಳಿತದ ಸಂದರ್ಭದಲ್ಲಿ ಭಾರತೀಯರು ಹೇಡಿಗಳಂತೆ ಇದ್ದರು. ಅಲ್ಲದೇ ಅನೇಕ ಜನ ಸಮಾಜದಲ್ಲಿ ನಿಕೃಷ್ಟರಾಗಿ ಜೀವಿಸುತ್ತಿದ್ದರು. ಗಾಂಧೀಜಿಯವರು ಅವರನ್ನೆತ್ತಿ ಅವರ ಹೃದಯದಲ್ಲಿ ವಜ್ರಹೃದಯವನ್ನು ಬಿತ್ತಿದರು. ಇದರಿಂದ ಹೇಡಿಗಳಂತಿದ್ದವರು ಶೂರರಾಗಿ, ದೇಶದ ರಕ್ಷಣೆಗೆ ಮುಂದಾದರು. ಆದ್ದರಿಂದ ಕವಿ ಗಾಂಧಿಯನ್ನು ಹಿರಿಯ ತಂದೆ ಎಂದು ಕರೆದಿದ್ದಾರೆ. | |
| 43. | ದಾರಿಯಲ್ಲಿ ಹೋಗುವ ಮಾರ್ಗದಲ್ಲಿ ಎಡಬಲದಲ್ಲಿ ಬಾಳೆ-ಸೀಬೆಯ ತೋಟಗಳಿರುವ ಜಾಗದಲ್ಲಿ ಹೋಗುವ ನಟ್ಟನಡುವಿನ ರಸ್ತೆಯೇ ನನ್ನ ತವರಿಗೆ ದಾರಿ. ಅದೇ ದಾರಿಯಲ್ಲಿ ನೇರವಾಗಿ ಹೋದರೆ ಅಲ್ಲೊಂದು ಹೆಂಚಿನ ಮನೆಯಿದೆ. ಅದಕ್ಕೆ ಕಂಚಿನ ಕದವಿದೆ. ಬಾಗಿಲಲ್ಲಿ ಎರಡು ಗಿಳಿ ನಿಂತಿವೆ. ಮನೆಯ ಮುಂದೆ ಮುತ್ತಿನ ಚಪ್ಪರವಿದೆ. ಅದೇ ನನ್ನ ತವರೂರು ಎಂದು ಹೇಳಿದ್ದಾಳೆ. | |
| 44. | ಧ್ಯಾನವೆಂಬ ಅಗ್ನಿಯು ಮನುಷ್ಯನಲ್ಲಿರುವ ದುರ್ಗುಣ, ದೋಷಗಳನ್ನು ದಹಿಸಿ ನಿವಾರಿಸುವುದು. | |
| 45. | ಸುಳ್ಳು ಸಂಸಾರದ ಸುಳಿಗೆ ಸಿಕ್ಕಿ ಧರ್ಮವನ್ನು ಮರೆತ್ತಿದ್ದೇವೆ. 'ಧನ, ಧಾನ್ಯ, ಸತಿ, ಸುತರ ಅಹಂಕಾರದಲ್ಲಿ ಕಾರಣವಿಲ್ಲದೆ ಯದುಪತಿಯನ್ನು ಮರೆತಿರುವಿರಿ. ಯಮದೂತರು ಬಂದು ತಮ್ಮ ಪ್ರಾಣವನ್ನು ಎಳೆದೊಯ್ಯುವಾಗ ಸತಿಸುತರು ನಮ್ಮನ್ನು ಕಾಯಲು ಸಾಧ್ಯವಿಲ್ಲವೆಂದು ದಾಸರು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪ್ರಶ್ನೆ ಸಂಖ್ಯೆ 46 ರಿಂದ 53 ರವರೆಗೆ ಸಂದರ್ಭಸಹಿತ ವಿವರಣೆ :<br>ಸಂದರ್ಭಕ್ಕೆ<br>ವಿವರಣೆಗೆ<br>ಒಟ್ಟು | 8 × 2 = 16<br>1 ಅಂಕ<br>1 ಅಂಕ<br>2 ಅಂಕಗಳು |
| 46. | ಪಾಠ – ಗದ್ಯ : 'ಬಹುಮುಖ ರಂಗ ಪ್ರತಿಭೆಯ ಬಿ.ವಿ. ಕಾರಂತ'<br>ಕರ್ತೃ : ಹಾ.ಸಾ. ಕೃಷ್ಣಮೂರ್ತಿ.<br>ಆಕರ ಕೃತಿ : ಬಿ.ವಿ. ಕಾರಂತ<br>ಸಂದರ್ಭ : ಕಾರಂತರಿಗೆ ಹೆಚ್ಚಾಗಿ ನಟನೆಗೆ ಸಿಗುತ್ತಿದ್ದುದು ಸ್ತ್ರೀ ಪಾತ್ರಗಳು. ಇದು ಅವರಿಗೆ ಮುಜುಗರದ ಸಂಗತಿಯಾಗಿತ್ತು. ಅವರು ಬೆಳ್ಳಾವೆ ನರಹರಿಶಾಸ್ತ್ರಿಗಳನ್ನು ಕೇಳಿದರು. 'ಹೇಗೆ ಸ್ವಾಮಿ ಇದು ? ಗಂಡಸರು ಹೆಣ್ಣು ಪಾತ್ರ ಮಾಡೋದು ಸರೀನಾ ?' ಅದಕ್ಕೆ ಶಾಸ್ತ್ರಿಗಳು, 'ಅದೇ ಅಭಿನಯ, ತಾನು ಏನು ಅಲ್ವೋ ಅದನ್ನು ಮಾಡೋದೇ ಅಭಿನಯ' ಎಂದು ಹೇಳಿದ ಮಾತು. | |
| 47. | ಪಾಠ – ಗದ್ಯ : ಲಕ್ಷ್ಮಣಿಗೆ ಪುರಾಣ<br>ಕರ್ತೃ : ಯಮುನಾ ಮೂರ್ತಿ<br>ಆಕರ ಕೃತಿ : ಪ್ರಸಾರ ಹಾಸ್ಯ<br>ಸಂದರ್ಭ : ಪೂರ್ಣಿಮಾ ಬಡಕುಟುಂಬದಲ್ಲಿ ಹುಟ್ಟಿದವಳು. ವರದಕ್ಷಿಣೆ ಕೊಡಲಾರದೆ, ಇಪ್ಪತ್ತು ಜನವಿದ್ದ ದೊಡ್ಡ ಕುಟುಂಬಕ್ಕೆ ಸೊಸೆಯನ್ನಾಗಿ ಮಾಡಿದರು. ಅವಳ ಪಾಲಿಗೆ ದೊರೆತ ಕೆಲಸವೆಂದರೆ ಹೊತ್ತಿಗೆ ಅರವತ್ತರಿಂದ ಎಂಬತ್ತು ರೊಟ್ಟಿ ಬಡಿಯುವುದು. ಒಂದು ತಿಂಗಳು ಕಳೆಯುವುದರೊಳಗೆ, ರಾತ್ರಿ ಮಲಗಿದಾಗಲೂ ಅವಳ ಕೈಗಳು ಬಡಿಯುತ್ತಿದ್ದವು. ಇದರಿಂದ ಅವಳ ಗಂಡನ ಬೆನ್ನು ನೀಲಿಗಟ್ಟಿತು. ಪತಿಯು ವಿವಾಹ ವಿಚ್ಛೇದನ ಕೊಡುವುದಾಗಿ ಬೆದರಿಕೆ ಹಾಕಿದ. ಒಮ್ಮೆ ಮನೆಗೆ ವೃದ್ಧ ಸನ್ಯಾಸಿಗಳ ಆಗಮನವಾಯಿತು. ತನ್ನ ಸಂಕಟವನ್ನು ತೋಡಿಕೊಂಡಳು. ಈ ಸಂದರ್ಭದಲ್ಲಿ ಹೇಳಿದ ಮಾತಿದು. | |
| 48. | ಪಾಠ – ಗದ್ಯ : ಮಗುವಿನ ಕರೆ<br>ಕರ್ತೃ : ಅಂಬಿಕಾತನಯದತ್ತ<br>ಆಕರ ಕೃತಿ : ನಿರಾಭರಣ ಸುಂದರಿ<br>ಸಂದರ್ಭ : ಈ ಮಾತನ್ನು ಶಾಸ್ತ್ರೀಯವರ ಸೊಸೆ ಚಿಂತಿಸಿದಳು. ಒಮ್ಮೆ ಮನೆಯಲ್ಲಿ ಕುಡಿಯಲು ನೀರಿಲ್ಲದ ಕಾರಣ, ಬಿರುಬಿಸಿಲಿನಲ್ಲಿ ಊರ ಹೊರಗಿರುವ ಬಾವಿಗೆ ನೀರು ತರಲು ಹೊರಟಳು. ಮನೆಯ ಕಷ್ಟ, ಹಿಂಸೆ, ಅಸಹಾಯಕನಾದ ಪತಿ, ಅತ್ತೆ–ಮಾವರ ಕಿರುಕುಳ ನೆನೆಸಿಕೊಂಡು ಬೇಸತ್ತುಹೋಗಿದ್ದಳು. ತನಗಾರೂ ಕರುಣೆ ನೀಡುವರು ಎಂದು ಕೊರಗುತ್ತಾ ಬಾವಿಯಲ್ಲಿ ಇಣಕಿ ನೋಡಿದಾಗ ಈ ಮಾತಿನ ಸಂದರ್ಭ ಬಂದಿದೆ. | |
| 49. | ಪಾಠ – ಗದ್ಯ : ಮತ್ತೆ ಬದುಕಿರಿ<br>ಕರ್ತೃ : ಎಚ್.ಕೆ. ರಾಮನಾಥ್<br>ಆಕರ ಕೃತಿ : ಶತಮಾನದ ಮಕ್ಕಳ ಸಾಹಿತ್ಯ<br>ಸಂದರ್ಭ : ಗೌರಿಯು ತನ್ನ ಪತಿ ರಾಮಕೃಷ್ಣನಿಗೆ ಹೇಳುವ ಮಾತಿದು. ಹಸಿವಿನಿಂದ ಕಂಗೆಟ್ಟಿದ ರಾಮಕೃಷ್ಣನು ಅರಮನೆಯಿಂದ ಮನೆಗೆ ಬಂದಾಗ, ಮನೆಯಲ್ಲಿ ತಿನ್ನಲು ಏನು ಇರಲಿಲ್ಲ. ಹಸಿವೆಯಿಂದ ಕಂಗಾಲಾಗಿದ್ದನು. ಅರಮನೆಯಲ್ಲಿ ಪ್ರಸಿದ್ಧ ವಿದೂಷಕ. ತಿನ್ನಲು ಅನ್ನವಿಲ್ಲವೆಂದು ಹಂಗಿಸುತ್ತಾರೆ. ರಾಜರ ಮುಂದೆ ಹಾಸ್ಯ ಮಾಡೋರ್ಗೆ ಬುದ್ಧಿ ಇದೆ. ಈ ಹಸಿವನ್ನು ನಿವಾರಿಸೋಕೆ ನಿಮಗೆ ಬುದ್ಧಿ ಇಲ್ಲ ಎಂದಾಗ ಯೋಚಿಸಿ ರಾಮಕೃಷ್ಣನು ಪತ್ನಿಗೆ ಒಂದು ಉಪಾಯವನ್ನು ಹೇಳುತ್ತಾನೆ. ಮಹಾರಾಣಿ ಹತ್ತಿರ ಹೋಗಿ ತನ್ನ ಗಂಡ ಹೊರಟು ಹೋದನೆಂದು ಹೇಳು ಎಂಬ ಸಂದರ್ಭದಲ್ಲಿ ಬಳಸಿದ ವಾಕ್ಯವಿದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 50. | ಪಾಠ – ಪದ್ಯ : ಹಡಗದ ಚಂದ<br>ಕರ್ತೃ : ವಿ.ಕೃ. ಗೋಕಾಕ<br>ಆಕರ ಕೃತಿ : ನವ್ಯಕಾವ್ಯ<br>ಸಂದರ್ಭ : ಈ ಮಾತನ್ನು ಕವಿ ಹಡಗಿನ ವೈಶಿಷ್ಟ್ಯವನ್ನು ವಿವರಿಸುವಾಗ ಹೇಳಿದ್ದಾರೆ. ಈ ಹಡಗು ಸಾಮಾನ್ಯ ದೋಣಿಯಲ್ಲ. ಇದು ಕಬ್ಬಿಣದ ಕಟ್ಟಡವಲ್ಲ, ಗುರಿಸಾಗುವ ಪಟ್ಟಣವಾಗಿದೆ. ನೂರಾರು ದೇಶ, ಭಾಷೆ, ಸಂಸ್ಕೃತಿಗಳಿರುವ ಜನರನ್ನು ಹೊಂದಿದೆ. ಈ ಹಡಗು ಬ್ರಹ್ಮಾಂಡದಂತೆ ಇದೆ ಎಂದು ವಿವರಿಸಿದ್ದಾರೆ. | |
| 51. | ಪಾಠ – ಪದ್ಯ : ದರ್ಶನ<br>ಕರ್ತೃ : ನಾ. ಮೊಗಸಾಲೆ<br>ಆಕರ ಕೃತಿ : ದಕ್ಷಿಣ ಕನ್ನಡದ ಶತಮಾನದ ಕಾವ್ಯ<br>ಸಂದರ್ಭ : ಕವಿಗಳ ಮಗ ಅಮೆರಿಕದಿಂದ ಬರೆದ ಪತ್ರದಲ್ಲಿ ಈ ರೀತಿ ಬರೆದಿದ್ದರು. ತಿರುಪತಿ ದರ್ಶನವನ್ನು ಮಾಡುವಾಗ ನಡೆದ ಘಟನೆ. ಅವರ ಮನದಲ್ಲಿ ಆಳವಾಗಿ ಬೇರೂರಿತ್ತು. ಅಮೆರಿಕಾದಲ್ಲಿ ಹಸಿರು ಕಾರ್ಡ್ ದೊರೆತಿದ್ದರೂ ಅದನ್ನು ತಿರಸ್ಕರಿಸಿ, ಭಾರತಕ್ಕೆ ಬರುತ್ತೇನೆಂಬ ಇಂಗಿತವನ್ನು ಪತ್ರದ ಮೂಲಕ ತಿಳಿಸಿದ ಸಂದರ್ಭದಲ್ಲಿ ಈ ವಾಕ್ಯವನ್ನು ಬಳಸಿದ್ದಾರೆ. | |
| 52. | ಪಾಠ – ಪದ್ಯ : ಭಾಗ್ಯದ ಬಳೆಗಾರ<br>ಕರ್ತೃ : ಶ್ರೀಮತಿ ಎನ್. ಪ್ರಭಾ (ಸಂಪಾದಿಸಿದ್ದಾರೆ)<br>ಆಕರ ಕೃತಿ : ಜಾನಪದ ಗೀತೆ<br>ಸಂದರ್ಭ : ಈ ಮಾತನ್ನು ಗರತಿಯೊಬ್ಬಳು ಬಳೆಗಾರನಿಗೆ ಹೇಳುತ್ತಾಳೆ. ತನ್ನ ತವರಿನಲ್ಲಿರುವ ತಾಯಿಗೆ ಅಚ್ಚಕೆಂಪಿನ ಬಳೆ, ಹಸಿರು ಗೀರಿನ ಬಳೆಗಳೆಂದರೆ ಇಷ್ಟ. ಇಂತಹ ಸುಂದರವಾದ ಬಳೆಯನ್ನು ನೀನು ತೆಗೆದುಕೊಂಡು ಹೋಗು ಎನ್ನುವ ಸಂದರ್ಭದಲ್ಲಿ ಈ ಮೇಲಿನ ವಾಕ್ಯ ಬಳಸಿದ್ದಾರೆ. | |
| 53. | ಪಾಠ – ಪದ್ಯ : ಆಧುನಿಕ ವಚನಗಳು<br>ಕರ್ತೃ : ಪ್ರೊ. ಈರಣ್ಣ ಇಟಗಿ<br>ಆಕರ ಕೃತಿ : ಆಧುನಿಕ ವಚನಗಳು<br>ಸಂದರ್ಭ : ಈ ಮಾತನ್ನು ವಚನಕಾರರು ಜನರ ಸ್ವಭಾವಕ್ಕೆ ಹೋಲಿಸಿದ್ದಾರೆ. ದೊಡ್ಡ ದೊಡ್ಡ ಕೋಡು, ಆಕಾರ, ಬಹಳ ಶಕ್ತಿಯಿದ್ದರೂ ದನಗಳನ್ನು ಕಂಡ ಜನ ಹೆದರುವುದಿಲ್ಲ. ಆದರೆ ಚಿಕ್ಕ ಆಕಾರ ಹೊಂದಿದ ಚೇಳು ಕಂಡರೆ ಜನ ಹೆದರುವರು. ಅಂದರೆ ಜನ ಆಕಾರಕ್ಕೆ ಅಂಜುವುದಿಲ್ಲ, ಅಧಿಕಾರಕ್ಕೆ, ಸಾಮರ್ಥ್ಯಕ್ಕೆ ಹೆದರುತ್ತಾರೆ ಎಂಬ ಸಂದರ್ಭದಲ್ಲಿ ಹೇಳಲಾಗಿದೆ. | |
| 54. | ಗಾದೆ ವಿಸ್ತರಣೆ : | 1 × 3 = 3 |
| | ಗಾದೆಯ ಮಹತ್ವ ಮತ್ತು ಅರ್ಥ | 1 ಅಂಕ |
| | ಭಾಷಾ ಶೈಲಿ, ಉದಾಹರಣೆಯೊಂದಿಗೆ ವಿವರಣೆ | 2 ಅಂಕಗಳು |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 55. | ಪದ್ಯ ಪೂರ್ಣಗೊಳಿಸಿದಾಗ ಪ್ರತಿ ಸರಿಯಾದ ಸಾಲಿಗೆ 1 ಅಂಕದಂತೆ ಒಟ್ಟು ನಾಲ್ಕು ಸಾಲುಗಳಿಗೆ ನಾಲ್ಕು ಅಂಕಗಳು :<br><br>ಕಾಲನ ದೂತರು ಕಾಲ್ಪಿಡಿದೆಳೆದಾಗ<br>ತಾಳು ತಾಳೆಂದರೆ ತಾಳುವರೆ<br>ದಾಳಿ ಬಾರದ ಮುನ್ನ ಧರ್ಮವ ಗಳಿಸಿರೋ<br>ಸುಳ್ಳು ಸಂಸಾರ ಸುಳಿಗೆ ಸಿಕ್ಕಲು ಬೇಡಿ ‖<br><br>ಅಥವಾ<br><br>ಪಂಪ ಮಹಾಚಲ ಜೋಡಿ ಶಿಖರಗಳು<br>ರನ್ನನ ಉನ್ನತ ಧವಳಗಿರಿ<br>ಶಿವಶರಣರ ವಿಸ್ತಾರದ ಬಯಲು<br>ಧುಮ್ಮಿಕ್ಕುವ ಹರಿಹರನ ಝರಿ. | 1 × 4 = 4 |
| 56. ಮತ್ತು 57. | ಐದು-ಆರು ವಾಕ್ಯಗಳಲ್ಲಿ ಉತ್ತರ : | 2 × 4 = 8 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | — ಭರತಕುಮಾರ ರಾತ್ರಿಯೆಲ್ಲ ಹಾಗೆಯೇ ಕುಳಿತಿದ್ದು ಬೆಳಗಾದಾಗ ಹತ್ತಿರದಲ್ಲಿದ್ದ ನದಿಗೆ ಹೋಗಿ ನೀರನ್ನು ಕುಡಿದ. ಆ ನೀರಿಗೆ ಆತನ ತಾಯಿಯ ಹಾಲಿನ ರುಚಿಯಿತ್ತು. ಹೂವು ಬಿಡಿಸಿ ಕಂಪು ಮೂಸಿದ. ಅದರಲ್ಲಿ ತಾಯಿಯ ಪರಿಮಳವಿತ್ತು. ಹಕ್ಕಿಯೊಂದನ್ನು ಹಿಡಿದು ಮಾತನಾಡಿಸಿದ. ಅದರ ದನಿಯಲ್ಲಿ ತಾಯಿಯ ಪ್ರೀತಿಯ ಸ್ವರವೇ ಕೇಳಿಸಿತು. ನೆಲವನ್ನು ದಿಟ್ಟಿಸಿ ನೋಡಿದ. ಆ ತಾಯಿಯ ಛಾಯೆಯೇ ಕಾಣುತ್ತಿತ್ತು. ಆ ವೇಳೆಗೆ ಮತ್ತೆ ಕತ್ತಲಾಯಿತು. ಮಲಗಿಬಿಟ್ಟನು. ಕನಸಿನಲ್ಲಿ ತಾಯಿ ಬಂದು ಹೀಗೆಂದಳು. "ಭರತಕುಮಾರ, ನಾನು ಈ ನೆಲದಲ್ಲಿ ಅಡಗಿಹೋಗಿದ್ದೇನೆ, ನೀರಿನಲ್ಲಿ ಕರಗಿಹೋಗಿದ್ದೇನೆ. ನಿನ್ನ ರೋಧನವನ್ನು ಕೇಳಿ, ಕೇಳಿ, ಕೊರಗಿ ಇಲ್ಲೇ ಇದ್ದುಬಿಟ್ಟಿದ್ದೇನೆ. ಈ ನೆಲವೇ ನಾನೆಂದು ಭಾವಿಸಿಕೋ''... ಬೆಳಗಾಗಿ ಎದ್ದು ರಾಜಕುಮಾರ ಆ ತನ್ನ ನೆಲವನ್ನೇ ತಾಯಿಯೆಂದು ಭಾವಿಸಿಕೊಂಡ. ಆ ನಾಡನ್ನೇ ಭಾರತಮಾತೆಯೆಂದೂ, ತಾಯಿ ಭಾರತಿಯೆಂದೂ ಕರೆಯಲಾರಂಭಿಸಿದ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಕೇದಾರಕ್ಕೆ ಗೌರಿ ಕುಂಡದಿಂದ ಹದಿನೈದು ಕಿ.ಮೀ. ಆಗುತ್ತದೆ. ಇಲ್ಲಿಗೆ ನಡೆದುಕೊಂಡು ಹೋಗಬಹುದು ಅಥವಾ ಕುದುರೆಗಳ ಮೇಲೆ ಕುಳಿತು ಹೋಗಬಹುದು. ಇಲ್ಲವಾದರೆ ಕಂಡಿ ಹಾಗೂ ದಂಡಿ ಎಂಬುದರಲ್ಲಿ ಹೋಗಬಹುದು. ಕೇದಾರವು ಮಂದಾಕಿನೀ ನದಿಯ ಅಂಚಿನಲ್ಲಿಯೇ ಹರಿದುಹೋಗುತ್ತದೆ. ಒಂದು ಕಡೆ ತಲೆ ಎತ್ತಿ ನಿಂತಿರುವ ಪರ್ವತ, ಮತ್ತೊಂದು ಕಡೆ ಪ್ರಪಾತವಿದೆ. ಅದರಾಚೆಗೆ ಬೃಹದಾಕಾರದ ಹಿಮವನ್ನು ಆವರಿಸಿರುವ ಬಿಳಿಯ ಬೆಟ್ಟವಿದೆ. ಕಣ್ಮನ ತಣಿಸುವ ಹಸಿರು ತುಂಬಿದೆ. ಹಿಮ ಕರಗಿ ಹರಿದು ಬರುವ ಬಿಳಿಯ ಧಾರೆ ಮನಮೋಹಕ. ಬಿಸಿಲಿಗೆ ಹೊಳೆಯುವ ಬೆಟ್ಟ, ಒಂದೊಂದು ಕ್ಷಣಕ್ಕೂ ಒಂದೊಂದು ರೂಪವನ್ನು ಹೊಂದುತ್ತಿರುತ್ತದೆ. ಇವೆಲ್ಲವನ್ನು ನೋಡುವಾಗ ಈ ಪ್ರಕೃತಿ ಎಂತಹ ವಿನ್ಯಾಸಕಾರನಪ್ಪ ಎಂದೆನಿಸುತ್ತದೆ. | |
| | — ಶಾಸ್ತ್ರಿಗಳ ಸೊಸೆ ತನ್ನೆಲ್ಲ ಸಮಸ್ಯೆಗಳಿಗೆ ಸಾವೇ ಪರಿಹಾರವೆಂದು ನಿರ್ಧರಿಸಿ ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದಳು. ಇನ್ನೇನು ಬಾವಿಯಲ್ಲಿ ಧುಮುಖಬೇಕು ಎನ್ನುವಷ್ಟರಲ್ಲಿ ಯಾರೋ ಅತ್ತಂತಾಯಿತು. ಅದು ತನ್ನ ಮಗುವೆಂದು ಭಾಸವಾಯಿತು. ಅದು ಮಲಗಿ ಬಹಳ ಹೊತ್ತಾಗಿತ್ತು. ಎದ್ದಿರಬಹುದು, ಹಸಿದೀತು, ಅತ್ತೆಯವರಿಗೆ ಮಾವನವರಿದ್ದಾರೆ. ಮಾವನವರಿಗೆ ಅವರ ಮಗನಿದ್ದಾನೆ. ಅವರಿಗೆ ತಾನಿಲ್ಲದಿದ್ದರೆ ಮತ್ತೊಂದು ಹೆಣ್ಣು ಮದುವೆಯಾಗಬಹುದು. ಆದರೆ ಮಗುವಿಗೆ ತಾನಿಲ್ಲದಿದ್ದರೆ ಇನ್ನಾರಿದ್ದಾರೆ ಎನಿಸಿತು. ಹೀಗೆ ತಾನು ಚಿಂತಿಸಿ ಸಾಯುವ ಯೋಚನೆ ಬಿಟ್ಟಳು. ಮಗುವಿನ ಕರೆ ತಾಯಿಯಲ್ಲಿ ಜೀವನ ಪ್ರೀತಿಯನ್ನು ಮತ್ತೆ ಮೂಡಿಸಿತು. | |
| 58. | ಯಾವುದೇ ಒಂದಕ್ಕೆ ಐದು-ಆರು ವಾಕ್ಯಗಳಲ್ಲಿ ಉತ್ತರ : | 1 × 4 = 4 |
| | ವಿಷಯ ಸಂಗ್ರಹಕ್ಕೆ | 3 ಅಂಕಗಳು |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | — ಕವಿ ಜೀವನದ ಕನಸುಗಳನ್ನು ನನಸಾಗಿಸಿ ಜೀವನವನ್ನು ಬೆಳಗಿಸುವ ಯುಗಾದಿಯ ನಿರೀಕ್ಷೆಯಲ್ಲಿದ್ದಾರೆ. ಮೂಡಣದಲ್ಲಿ ಚಿಮ್ಮಿ ಚಿಗುರಿದ ಜೀವನದ ಉಸಿರನ್ನು ಚಿಮ್ಮಿಸುವ ಯುಗಾದಿಯ ನಿರೀಕ್ಷೆಯಲ್ಲಿದ್ದಾರೆ. ಹೊಸ ಹೂ ಗಿಡಗಳನ್ನು ನೋಡುತ್ತಾ ಕುಣಿದಾಡುವ, ಪುಳಕಗೊಳ್ಳುವ ಹೊಸ ಯುಗದ ನಿರೀಕ್ಷೆಯಲ್ಲಿದ್ದಾರೆ. | |
| | — ಭರತ ಚಕ್ರವರ್ತಿಯು ಪುರುಪರಮೇಶ್ವರನ ಹಿರಿಯ ಪುತ್ರ. ಅವನು ಭಾರತ ದೇಶದಲ್ಲಿ ಶೃಂಗಾರವಾಗಿ ಪ್ರತಿಸೂರ್ಯನಂತೆ ಶೋಭಿಸುತ್ತಿದ್ದನು. ಅಯೋಧ್ಯಾ ಪುರದ ಸಿಂಹಾಸನವನ್ನೇರಿ ಆನಂದದಿಂದ ಪ್ರಜೆಗಳನ್ನು ಸಲಹುತ್ತಿದ್ದನು. ಧರೆಯಲ್ಲಿ ಎಲ್ಲವೂ ಸುಟ್ಟರೆ ಭಸ್ಮವುಂಟು. ಆದರೆ ಕರ್ಪೂರ ಸುಟ್ಟರೆ ಭಸ್ಮವಿಲ್ಲ. ಅದರಂತೆ ಭೂಲೋಕದಲ್ಲಿರುವವರಿಗೆ ಹಸಿವು, ನಿದ್ರೆ, ಮಲ ಮೂತ್ರ ವಿಸರ್ಜನೆ ಮೊದಲಾದ ನೈಸರ್ಗಿಕ ಕ್ರಿಯೆಗಳಿವೆ. ಆದರೆ ಭರತನಿಗೆ ಇದಾವುದೂ ಇಲ್ಲ. ಇವನು ನವರತ್ನ ಖಚಿತವಾದ ಸಿಂಹಾಸನದ ಮೇಲೆ ಕುಳಿತುಕೊಂಡ ಭಂಗಿ ಮನಮೋಹಕವಾಗಿದ್ದು ಉದಯರವಿಗೆ ಎದುರಾದ ಪ್ರತಿಸೂರ್ಯನಂತೆ ಶೋಭಿಸುತ್ತಿದ್ದನು. | |

[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 59. | ಪತ್ರ ಲೇಖನ (ಒಂದಕ್ಕೆ ಮಾತ್ರ) : | 1 × 5 = 5 |
| | ತಂದೆಯವರಿಗೆ ಪತ್ರ — ಇಂದ, ವಿಳಾಸ / ದಿನಾಂಕ / ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ / ಗೆ, ವಿಳಾಸ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | ಅಥವಾ | |
| | ಮಾಲಿನ್ಯ ಮಂಡಳಿಗೆ ಪತ್ರ — ಇಂದ, ವಿಳಾಸ / ಗೆ, ವಿಳಾಸ / ಸಂಬೋಧನೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ / ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| 60. | ಪ್ರಬಂಧ ಲೇಖನ (ಒಂದಕ್ಕೆ ಮಾತ್ರ) : | 1 × 5 = 5 |
| | ಪೀಠಿಕೆ/ಪ್ರಸ್ತಾವನೆ | 1 ಅಂಕ |
| | ವಿಷಯದ ಬೆಳವಣಿಗೆ | 2 ಅಂಕಗಳು |
| | ಮುಕ್ತಾಯ/ಉಪಸಂಹಾರ | 1 ಅಂಕ |
| | ಭಾಷೆ, ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |